# ಮೂರ್ತಿ ಚಿಕ್ಕದಾದರೂ ಹೃದಯ ದೊಡ್ಡದು

ಸಂಗ್ರಹ: ಶ್ರೀಮತಿ
ಸರೋಜಾ ಚಾಮಯ್ಯ,
ಮೈಸೂರು

ಬೆಂಗಳೂರಿನ ಮಾಂಟೆಸರಿ ಶಾಲೆಯ ಶತಮಾನೋತ್ಸವದ ಸಂದರ್ಭದಲ್ಲಿ ಮೂರು ದಿನಗಳ ಒಂದು ಸಮ್ಮೇಳನ ನಡೆದಿತ್ತು. ಹಲವಾರು ಪ್ರಮುಖ ಬಾಲೋದ್ಯಾನ ಶಾಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಉಪಾಧ್ಯಾಯರೊಬ್ಬರು ವೇದಿಕೆಗೆ ಬಂದು ತಮ್ಮ ಶಾಲೆಯಲ್ಲಿ ನಡೆದ ಒಂದು ಘಟನೆಯನ್ನು ವಿವರಿಸಿದರು:

ಅವರ ಶಾಲೆಯ ಎರಡನೆಯ ತರಗತಿಯಲ್ಲಿ ಓದುತ್ತಿದ್ದ ಪುಟ್ಟ ಹುಡುಗಿ ಸಿಂಧೂಜಾ ಒಂದು ಶನಿವಾರ ರಾತ್ರಿಯಂದು ಮನೆಯಲ್ಲಿ ಏನು ಮಾಡಿದರೂ ಊಟ ಮಾಡಲಿಲ್ಲ. ರಮಿಸಿಯಾಯಿತು, ಬೆದರಿಸಿಯೂ ಆಯಿತು. ಯಾವುದಕ್ಕೂ ಆ ಮಗು ಜಗ್ಗಲಿಲ್ಲ. ರೇಗಿದ ಆ ತಾಯಿ ಗಂಡನನ್ನು ಕರೆದಳು, "ನೋಡಿ, ನಿಮ್ಮ ಮಗಳು ಏನು ಮಾಡಿದರೂ ಊಟ ಮಾಡುತ್ತಿಲ್ಲ. ನನಗೆ ಸಾಕಾಯಿತು. ನೀವೇ ಬಂದು ವಿಚಾರಿಸಿ" ಎಂದಳು. ಪತ್ರಿಕೆ ಓದುತ್ತಿದ್ದ ತಂದೆ ಅದನ್ನು ಪಕ್ಕಕ್ಕೆ ಇಟ್ಟು "ಏನು ಪುಟ್ಟಿ?" ಎಂದ. ನಮ್ಮಲ್ಲಿ ಒಂದು ತಮಾಷೆಯೆಂದರೆ ತಾಯಿಗೆ ಮಗು ಹೊಂದಿಕೊಂಡಿದ್ದರೆ ಅದು ಅವಳ ಮಗು. ವಿರುದ್ಧವಾದರೆ ಗಂಡನ ಮಗು. ಗಂಡನಿಗೂ ಅದೇ ರೀತಿಯ ಭಾವನೆ! ತನ್ನ ಮಾತು ಕೇಳುವಂತಿದ್ದರೆ ತನ್ನ ಮಗು, ವಿರುದ್ಧವಾದರೆ ಹೆಂಡತಿಯ ಮಗು! "ನನ್ನ ಮಾತನ್ನು ನಡೆಸಿಕೊಡುವುದಾದರೆ, ಊಟ ಮಾಡುವೆ" ಎಂದಳು ಮಗಳು. ಅವನಿಗೆ ಒಂದು ಗಳಿಗೆ ಆತಂಕವಾದರೂ, "ಆಯಿತು ಅದೇನು ಹೇಳು" ಎಂದ. "ಖಂಡಿತಾ ನಡೆಸಬೇಕು" ಎಂದಳು. ತಂದೆ ಒಪ್ಪಿದ. ತಾಯಿಯ ಬಳಿಗೆ ನಡೆದು, "ನೋಡು, ಅಪ್ಪ ಒಪ್ಪಿದ್ದಾರೆ, ನೀನೂ ಒಪ್ಪಬೇಕು" ಎಂದು ಪುಸಲಾಯಿಸಿದಳು. "ಆಯಿತು ಮಹಾರಾಯಿತಿ" ಎಂದಳು ತಾಯಿ. ಮಗು ತೃಪ್ತಿಯಿಂದ ಊಟ ಮಾಡಿತು. ಮೊಸರನ್ನ ಕಂಡರೆ ಅವಳಿಗೆ ಆಗುವುದಿಲ್ಲವಂತೆ. ಅಂದು ಅದನ್ನೂ ತಿಂದು ತೃಪ್ತಿಯಿಂದ ಮಲಗಿದಳು.

ಬೆಳಗಾಯಿತು. ಎದ್ದು ಬಂದು ಅಪ್ಪನ ಕೊರಳಿಗೆ ಜೋತು ಬಿದ್ದು, "ಅಪ್ಪಾ ನನ್ನ ಮಾತು ನಡೆಸಿಕೊಡು" ಎಂದಳು. ತಾಯಿಯೂ ಬಳಿಗೆ ಬಂದಳು. "ಅದೇನು ಹೇಳು" ಎಂದಾಗ ಆ ಮಗು ಹೇಳಿದ್ದು, "ನನ್ನ ತಲೆಯನ್ನು ಬೋಳಿಸಿ!" ಎಂದು. ಇಬ್ಬರಿಗೂ ದಿಗ್ಭ್ರಮೆ. "ಪಾಪು, ನೀನು ಹೆಣ್ಣು ಮಗು. ಇಷ್ಟು ಸೊಂಪಾದ ಕೂದಲು, ಚೆಂದವಾಗಿದೆ. ಅದನ್ನು ಬೋಳಿಸಿದರೆ ನೀನು ಅಸಹ್ಯವಾಗಿ ಕಾಣುವೆ!" ಎಂದರು. ಏನಾದರೂ ಅವಳದ್ದು ಒಂದೇ ಹಠ. ಅಂದು ಭಾನುವಾರವಾದ್ದರಿಂದ ಕ್ಷೌರಿಕನ ಅಂಗಡಿಗೆ ಕರೆದೊಯ್ದು ತಲೆ ಬೋಳಿಸಿದರು.

ಮಾರನೆಯ ದಿನ ಸೋಮವಾರ ಶಾಲೆಗೆ ಹೋಗಲು ತುರಾತುರಿಯಿಂದ ಸಿದ್ಧತೆ ನಡೆಸಿ ಅಪ್ಪನೊಡನೆ ಶಾಲೆಗೆ ಹೊರಟಳು. ಶಾಲೆ ಬಂದಿತು. ಅಪ್ಪ, "ಒಳಕ್ಕೆ ಹೋಗು ಮಗೂ" ಎಂದರು. ಇವಳು ಹೋಗಲಿಲ್ಲ. ಅಲ್ಲಿಯೇ ಹೊರಗೆ ನಿಂತಳು. "ಇವಳಿಗೆ ಈಗೇನಾದರೂ ಸಂಕೋಚವಾಗಿರಬಹುದೆ" ಎಂದು ತಂದೆಗೆ ಆತಂಕ. "ನೀನು ಹೋಗಪ್ಪಾ, ನಾನು ಆಮೇಲೆ ಹೋಗುವೆ" ಎಂದಳು.

ಅಷ್ಟರಲ್ಲಿ ಕಾರೊಂದು ಬಂದಿತು. ಅದರಿಂದ ಇವಳದೇ ವಯಸ್ಸಿನ ಒಬ್ಬ ಪುಟ್ಟ ಬಾಲಕ ಮತ್ತು ಆತನ ತಾಯಿ ಇಳಿದರು. ಇವಳು ಓಡಿಹೋಗಿ ಆ ಹುಡುಗನ ಕೈಹಿಡಿದಳು. ಹುಡುಗನ ತಾಯಿ "ನೀವು ಈ ಮಗುವಿನ ತಂದೆಯೇ?" ಎಂದು ಕೇಳಿದಳು ವಿನಯದಿಂದ. ಆತ ಹೌದೆಂದ. ಆಗ ಆಕೆ, "ಎಷ್ಟು ಜನ್ಮದ ಪುಣ್ಯದಿಂದ ನೀವು ಅವಳನ್ನು ಪಡೆದಿರುವಿರೋ ಏನೋ! ಅವಳು ನಮ್ಮ ಮನೆಯ ದೇವರು," ಎಂದಳು. ತಂದೆಗೆ ದಿಗ್ಭ್ರಮೆ. "ಯಾಕೆ ಏನಾಯಿತು?" ಎಂದು ವಿಚಾರಿಸಿದ.

ಆ ತಾಯಿ ಹೇಳಲು ಪ್ರಾರಂಭಿಸಿದಳು: "ನನ್ನ ಮಗನಿಗೆ ಕ್ಯಾನ್ಸರ್ ಖಾಯಿಲೆ. ಕಿಮೋಥೆರಪಿಯಿಂದ ಅವನ ತಲೆ ಗೂದಲೆಲ್ಲಾ ಉದುರಿಹೋಗಿದೆ. ಈಗ ಅವನ ಸ್ಥಿತಿ ಸ್ವಲ್ಪ ಉತ್ತಮವಾಗಿದೆ. ತಲೆಗೂದಲಿಲ್ಲದ ಅವನಿಗೆ ಜೊತೆಯವರು ಅಣಕಿಸುವರೆಂದು ಶಾಲೆಗೆ ಬರಲು ಸಂಕೋಚ. ಆದರೆ ನಿಮ್ಮ ಮಗಳು ಆಗಾಗ ಬಂದು ಅವನಲ್ಲಿ ಉತ್ಸಾಹ, ಪ್ರೋತ್ಸಾಹ ತುಂಬಿ, 'ಟೀಚರ್ ಹೇಳಿಕೊಡುವ ಚೆಂದ ಚೆಂದದ ಹಾಡುಗಳು ನಿನಗೆ ಬೇಡವಾ, ನಗುವ ಕಥೆಯೆಲ್ಲಾ ಬೇಡವಾ? ಎಷ್ಟು ಚೆನ್ನಾಗಿ ಹೇಳಿಕೊಡುತ್ತಾರೆ! ಬೇಕಾದರೆ ನಿನ್ನ ಜೊತೆಗೆ ನಾನೂ ತಲೆ ಬೋಳಿಸಿಕೊಳ್ಳುವೆ, ಇಬ್ಬರೂ ಒಟ್ಟಿಗೆ ತರಗತಿಗೆ ಹೋಗುವ' ಎಂದು ಹೇಳಿದ್ದಕ್ಕೆ ಅವನು ಒಪ್ಪಿ ಬಂದಿದ್ದಾನೆ. ನೋಡಿ ನಿಮ್ಮ ಮಗಳೂ ಕೂಡ ತಲೆ ಬೋಳಿಸಿಕೊಂಡಿದ್ದಾಳೆ! ಯಾವ ಜನ್ಮದ ಪುಣ್ಯವೋ ನಮ್ಮ ಮನೆಗೆ ಬಂದು ನನ್ನ ಮಗನಿಗೆ ಒತ್ತಾಸೆಯಾಗಿದ್ದಾಳೆ" ಎಂದು ಕಣ್ಣೊರೆಸಿಕೊಂಡರು. ಇವಳ ತಂದೆಯೂ, "ಮಗೂ, ಈ ಜನ್ಮದಲ್ಲಿ ನೀನು ನನ್ನ ಮಗಳಾಗಿ ಹುಟ್ಟಿ ಬಂದಿರುವೆ. ಮುಂದಿನ ಜನ್ಮದಲ್ಲಿ ನನ್ನ ತಾಯಿಯಾಗಿ ಬಾ. ನನಗೂ ನಿನ್ನ ಸಂಸ್ಕಾರ ಬೇಕು ಕಂದಾ" ಎಂದು ಬಾಚಿ ತಬ್ಬಿಕೊಂಡನಂತೆ.